ಎಂದ. ''ಅದು ಯಾಕೆ ಹಾಗೆ?'' ಕೇಳಿದೆ ನಾನು. ''ನಮಗೆ ಕಾನೂನು ಪಾಲಿಸದೇ ಇರುವುದರಲ್ಲಿ ಒಂಥರಾ ಕಿಕ್ ಸಿಗುತ್ತೆ'' ಹೇಳಿ ಕಳ್ಳ ನಗೆ ನಕ್ಕ.

''ಸಲ್ವಾರ್ ತೊಟ್ಟ ಪಾಕಿಸ್ತಾನಿ ಪಠಾಣರೊಂದಿಗೆ ಸುಮ್ ಸುಮ್ನೆ ಜಾಸ್ತಿ ಮಾತಾಡಲು ಹೋಗಬೇಡ. ಕೆಲವು ಬಾರಿ ನಮ್ಮ ಕೆಲವು ಮಾತುಗಳಿಗೆ ಅವರು ಸುಮ್ಮನೆ ಉರಿದುಬೀಳ್ತಾರೆ. ಗದರಿಸಿದ್ದನ್ನಾದರೂ ಸಹಿಸಿಯಾರು, ಗೇಲಿಯನ್ನು ಸಹಿಸುವುದಿಲ್ಲ ಅವರು. ಕೆಲವೊಮ್ಮೆ ನಾವು ಹಾಸ್ಯಕ್ಕೇನಾದರೂ ಹೇಳಿದ್ದ ಮಾತುಗಳನ್ನೇ ಅವರು ಸೀರಿಯಸ್ ಆಗಿ ತೆಗೆದುಕೊಂಡುಬಿಡುತ್ತಾರೆ. ವಿದ್ಯೆ ಕಡಿಮೆ, ತಲೆಯಲ್ಲಿ ಮೆದುಳು ಕಡಿಮೆ, ಯಾವುದು ಹಾಸ್ಯಕ್ಕೆ ಹೇಳಿದ್ದು, ಅಲ್ಲೇ ಬಿಟ್ಟುಬಿಡಬೇಕಾದ್ದು ಯಾವುದು ಅನ್ನುವುದರ ಮಾಹಿತಿಯಿಲ್ಲ ಅವರಿಗೆ'' ಅಂದಿದ್ದ ಮಾವ. ''ಇಂಟರ್ವ್ಯೂ ಇದೆಯಾ?'' ಕೇಳಿದ ಆತ. ಹೌದೆಂಬಂತೆ ತಲೆಯಾಡಿಸಿದೆ. ''ಇಷ್ಟು ಬೇಗ ಇಂಡಸ್ಟ್ರಿಯಲ್ ಏರಿಯಾಕ್ಕೆ ಹೊರಟದ್ದು ನೋಡಿಯೇ ತಿಳಿದುಕೊಂಡೆ ನಾನು'' ಎಂದ ಆತ. ಮಾವ ಹೇಳಿದಂತೆ ಅವನಲ್ಲಿ ಮಾತನಾಡದೆ ನಾನು ಸುಮ್ಮನೆ ಹೊರಗೆ ನೋಡುತ್ತಿದ್ದೆ. ಸ್ವಲ್ಪ ಹೊತ್ತು ಸುಮ್ಮನೆ ಅತ್ತಿತ್ತ ನೋಡುತ್ತ ಒಂದೇ ಕೈಯಲ್ಲಿ ಸ್ಟೀರಿಂಗ್ ತಿರುಗಿಸುತ್ತಾ ಕಾರು ಚಲಾಯಿಸಿದ. ಅತ ಮತ್ತೂ ಮಾತನಾಡದೇ ಇರಲಾಗದೆ, ''ನಾನು ಕೂಡ ಎರಡುಬಾರಿ ಇಂಟರ್ವ್ಯೂಗೆ ಹೋಗಿದ್ದೆ'' ಎಂದು ನಕ್ಕ.

